*MVC No. 86/2020*
*PW:01*

**ಸಾಕ್ಷಿಯನ್ನು ದಿಃ *24/11/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಃ ಶ್ರೀಮತಿ ಆರಎಸಬಿ ವಕೀಲರಿಂದ 4 ನೇ ಎದುರುದಾರರ ಪರವಾಗಿ.**

ನಾನು ದಿಃ07-01-2020 ರಂದು ಶಬರಿಮಲ್ಯೆಗೆ ಹೋಗಿ ದಿಃ13-01-2020 ರಂದು ಮರಳಿ ಬರುವಾಗ ಅಪಘಾತವಾಗಿರುತ್ತದೆ. ಮಿನಿ ಬಸ್ ಕೆಎ 25 ಸಿ 2553 ವಾಹನ ಧಾರವಾಡಕ್ಕೆ ಸೇರಿದ್ದು ಎಂದರೆ ನಿಜ. ಸದರಿ ಬಸ್ಸನ್ನು ನಾರಾಯಣ ದತ್ತಾತ್ರೇಯ ಲಾತೂರಕರ ಅಂದರೆ ಪ್ರತಿವಾದಿ ನಂ.3 ಚಲಾಯಿಸುತ್ತಿದ್ದರು ಎಂದರೆ ನನಗೆ ಹೆಸರು ನೆನಪಿಲ್ಲ. ಅಪಘಾತ ಸ್ಥಳ ಶಬರಿಮಲ್ಯೆದಿಂದ 35-40 ಕಿ.ಮಿ ಅಂತರದಲ್ಲಿರಬಹುದು. ಸದರಿ ಬಸ್ಸನ ಚಾಲಕ ಸಂಚಾರಿ ನಿಯಮಗಳನ್ನು ಪಾಲಿಸುತ್ತ ನಿಧಾನವಾಗಿ ಚಲಾಯಿಸುತ್ತಿದ್ದ ಎಂದರೆ ನಿಜ. ಅಪಘಾತವಾದ ರಸ್ತೆ ಏರು ರಸ್ತೆ ಇರುತ್ತದೆ ಎಂದರೆ ನಿಜ. ನಾನು ಹೋಗುತ್ತಿರುವ ಬಸ್ಸನಲ್ಲಿ ಅಂದಾಜು 11-12 ಜನರು ಇದ್ದೇವು.

ಕೇರಳ ರಾಜ್ಯಕ್ಕೆ ಸಂಬಂಧಿಸಿದ ಬಸ್ಸ ಎದುರುಗಡೆಯಿಂದ ಬರುತ್ತಿತ್ತು ಎಂದರೆ ನಿಜ. ಸದರಿ ಬಸ್ಸ ಚಾಲಕ ಅತೀ ವೇಗ ಮತ್ತು ನಿಷ್ಕಾಲಜಿತನದಿಂದ ಚಲಾಯಿಸಿಕೊಂಡು ಬಂದು ನಮ್ಮ ಬಸ್ಸಗೆ ಡಿಕ್ಕಿ ಪಡಿಸಿತು ಎಂದರೆ ನಿಜ. ದೂರನ್ನು ನಮ್ಮ ಬಸ್ಸ ಚಾಲಕ ನಾರಾಯಣ ಕೊಟ್ಟಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ನಾನು ಆಸ್ಪತ್ರೆಯಲ್ಲಿರುವ ಕಾರಣ ಯಾರು ದೂರು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ದೂರಿನ ಮೇಲೆ ಪ್ರ.ವ.ವ ಮತ್ತು ಅಂತಿಮ ವರದಿಯನ್ನುಕೇರಳ ರಾಜ್ಯ ಬಸ್ಸ ಚಾಲಕನ ತಪ್ಪಿನಿಂದ ಅಗಿರುತ್ತೆ ಎಂದು ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತ ಕೇರಳ ರಾಜ್ಯ ಬಸ್ಸ ಚಾಲಕ ತಪ್ಪಿನಿಂದ ಆಗಿರುವ ಕಾರಣ ಅವರೇ ಪರಿಹಾರ ಹಣ ಕೊಡಲು ಬಾದ್ಯಸ್ಥರು ಎಂದರೆ ನಿಜ.

ನಮ್ಮ ಬಸ್ಸನಲ್ಲಿ ಎಷ್ಟು ಜನಕ್ಕೆ ಗಾಯವಾಗಿದೆ ಎಂದು ನನಗೆ ಗೊತ್ತಿಲ್ಲ, ನನಗೆ ಗಾಯವಾಗಿದ್ದು ಮಾತ್ರ ಹೇಳಬಹುದು. ಸದರಿ ಅಪಘಾತದಲ್ಲಿ ನನಗೆ ಯಾವುದೇ ರೀತಿ ಗಾಯಗಳು ಆಗಲಾರದ ಕಾರಣ ಅದಕ್ಕೆ ಸಂಬಂಧಪಟ್ಟ ಗಾಯದ ಪ್ರಮಾಣಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಆಸ್ಪತ್ರೆಯ ದಾಖಲಾತಿಗಳು ಅಪಘಾತಕ್ಕೆ ಸಂಬಂಧಿಸಿದ್ದು ಇರುವುದಿಲ್ಲ, ಅವುಗಳು ಸೃಷ್ಟೀಕರಣ ಮಾಡಿರುವ ಖೊಟ್ಟಿ ದಾಖಲಾತಿಗಳು ಎಂದರೆ ಸರಿಯಲ್ಲ. ನನ್ನ ಬಲಗಾಲಿನ ಮೂಳೆ

ಮುರಿತದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರದ 2 ನೇ ಖಂಡಿಕೆಯಲ್ಲಿ ಬರೆದಿರುವ ಗಾಯದ ವಿಷಯ ಸಂಗತಿಗಳು ಮತ್ತು ಮುಂದುವರೆದ ಚಿಕಿತ್ಸೆಯ ದಾಖಲಾತಿಗಳು ಇಲ್ಲದ ಸುಳ್ಳು ಸಂಗತಿಗಳು ಇವೆ ಎಂದರೆ ಸರಿಯಲ್ಲ. ನನಗೆ ಅಂಗನ್ಯೂನತೆ ಆಗಿದೆ ಎಂದು ತೋರಿಸಲು ಯಾವುದೇ ರೀತಿ ವೈದ್ಯಕೀಯ ಪ್ರಮಾಣಪತ್ರ ಹಾಜರುಪಡಿಸಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಮುಂದೆ ಹಾಜರುಪಡಿಸುತ್ತೇನೆ ಎಂದು ಉತ್ತರಿಸುತ್ತಾರೆ. ಆದ್ದರಿಂದ ನನಗೆ ಯಾವುದೇ ರೀತಿ ಅಂಗನ್ಯೂನತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ವೈದ್ಯಕೀಯ ಬಿಲ್ಲುಗಳು ಪರಿಹಾರದ ಹಣದ ಸಲುವಾಗಿ ಸೃಷ್ಟೀಕರಣ ಮಾಡಿರುವ ಖೊಟ್ಟಿ ದಾಖಲಾತಿಗಳು ಎಂದರೆ ಸರಿಯಲ್ಲ.

ನನಗೆ 31 ವರ್ಷ. ನನಗೆ 31 ವರ್ಷ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರು ಪಡಿಸಿಲ್ಲ, ಆದ್ದರಿಂದ ನನ್ನ ವಯಸ್ಸು 45 ಇರುತ್ತದೆ ಎಂದರೆ ಸರಿಯಲ್ಲ. ನನ್ನ ಉದ್ಯೋಗದ ಕುರಿತು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ನಿಜ. ಆದ್ದರಿಂದ ನಾನು ತಿಂಗಳಿಗೆ 20 ಸಾವಿರ ರೂಪಾಯಿಗಳನ್ನು ದುಡಿಯುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೊದಲಿನಂತೆ ಸಂಪೂರ್ಣವಾಗಿ ಆರಾಮವಾಗಿದ್ದರು ಸಹ ನ್ಯೂನತೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಸಲ್ಲಿಸಿರುವ ಅಂತಿಮ ವರದಿಯಲ್ಲಿ ನನ್ನ ಹೆಸರು ತೋರಿಸಲಾರದ ಕಾರಣ ನನಗೆ ಗಾಯಗಳು ಆಗಿರುವುದಿಲ್ಲ ಎಂದರೆ ಸುಳ್ಳು.

***ಪಾಟೀ ಸವಾಲು : 5 ನೇ ಎದುರುದಾರರ ಪರ ವಕೀಲರ ಮನವಿಯ ಮೇರೆಗೆ ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.